**ಅ. ದಾ. ಸಂ. : 329 / 2016**
**ಪಿ.ಡಬ್ಲ್ಯೂ : 01**

**ದಿನಾಂಕ : 14-02-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಪ್ರತಿವಾದಿಯ ಪರ ಶ್ರೀ. ಎಂ.ಎನ್. ವಕೀಲರಿಂದ :-**

ದಾವೆ ಹೂಡಲು ನನ್ನ ತಂದೆ ವಕೀಲರಿಗೆ ಮಾಹಿತಿ ನೀಡಿರುತ್ತಾರೆ. ಪ್ರಸ್ತುತ ನನ್ನ ತಂದೆ ಆರೋಗ್ಯವಾಗಿರುವುದಿಲ್ಲ. ನನಗೆ ದಾವೆಯ ಸಂಪೂರ್ಣ ಮಾಹಿತಿ ಇದೆ. ದಾವ ಸ್ವತ್ತು ನಮ್ಮದು ಎಂದು ಪರಿಹಾರ ಕೋರಿ ದಾವೆ ಹೂಡಿರುತ್ತೇನೆ. ಪ್ರತಿವಾದಿಯವರು ಅವರ ತಾತನ ಕಾಲದಿಂದ ಒಳಗೆರೆಪಾಳ್ಯದಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಅವರ ಮನೆಯ ಹಿಂಭಾಗ ಹಿತ್ತಲು ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ಕುಟುಂಬದವರಿಗೆ 4 ಮನೆಗಳಿವೆ. ಪ್ರತಿವಾದಿ 1 ಮತ್ತು ಅವರ ಸಹೋದರ ಶಿವರಾಮಯ್ಯನವರು ಅಕ್ಕಪಕ್ಕದಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ, ಉಳಿದವರು ಅದೇ ಊರಿನಲ್ಲಿ ಬೇರೆ ಬೇರೆ ಕಡೆ ಮನೆ ನಿರ್ಮಿಸಿರುತ್ತಾರೆ.

2. ನಾನು ದಾವೆಯನ್ನು 1 ಎಕರೆ 1 ಗುಂಟೆ ಖರಾಬನ್ನು ಸೇರಿಸಿ ಹೂಡಿರುತ್ತೇನೆ. ಸರ್ವೆ ನಂಬರ್-82/6(ಸಿ) 1 ಎಕರೆ 1 ಗುಂಟೆ ಮೂಲತಃ ನನ್ನ ತಾತ ರಂಗಯ್ಯನವರಿಗೆ ಸೇರಿತ್ತು. ನನ್ನ ತಾತನವರಿಗೆ ಅವರ ಚಿಕ್ಕಮ್ಮ ಪುಟ್ಟಮಾರಮ್ಮನವರ ಕಡೆಯಿಂದ ಬಂದಿರುತ್ತದೆ, ಸಾಕ್ಷಿ ಮುಂದುವರೆದು ಸದರಿ ಸ್ವತ್ತು ವ್ಯವಸ್ಥಾಪತ್ರದ ಮೂಲಕ ನನ್ನ ತಾತನಿಗೆ ಬಂದಿರುತ್ತದೆ. ಸದರಿ ವ್ಯವಸ್ಥಾಪನ ಪತ್ರವು ದಿಃ 03-03-1941 ರಲ್ಲಿ ಆಗಿರುತ್ತದೆ. ಸದರಿ ದಾಖಲೆಯನ್ನು ಹಾಜರು ಪಡಿಸಿಲ್ಲ, ಸಾಕ್ಷಿ ಮುಂದುವರೆದು ಹಾಜರು ಪಡಿಸುತ್ತೇನೆ ಎನ್ನುತ್ತಾರೆ.

3. ನನ್ನ ತಂದೆಗೆ ಒಬ್ಬ ಸಹೋದರನಿದ್ದು, ಚಲುವಯ್ಯ ಎಂದು ಹೆಸರು. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ನಡುವೆ ಭಾಗಪತ್ರ ಆಗಿರುವುದಿಲ್ಲ, ಸಾಕ್ಷಿ ಮುಂದುವರೆದು ಮೌಖಿಕ ವಿಭಾಗ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ಪುಟ್ಟಮಾರಮ್ಮನವರಿಗೆ 1 ಎಕರೆ 1 ಗುಂಟೆ ಜಮೀನಿತ್ತು ಎಂದು ತೋರಿಸಲು ಸರ್ವೆ ಸ್ಕೆಚ್ ಮಾಡಿಸಲಾಗಿದೆ. ಮೌಖಿಕ ವಿಭಾಗವಾದ ನಂತರ ಸರ್ವೆ ಸ್ಕೆಚ್ ಮಾಡಿಸಿರುವುದಿಲ್ಲ. ದಾವೆ ಹೂಡುವ

ಪೂರ್ವದಲ್ಲಿಯಾಗಲೀ ಅಥವಾ ದಾವೆ ಹೂಡಿದ ನಂತರವಾಗಲೀ ದಾವೆ ಸ್ವತ್ತು ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿ. ನನ್ನ ತಾತನ ಕಾಲದಲ್ಲಿ ಆದ ಸರ್ವೆ ಸ್ಕೆಚ್ ಹಾಜರು ಪಡಿಸಿರುತ್ತೇನೆ. ನನ್ನ ತಾತನ ಕಾಲದಲ್ಲಿ ಯಾವುದೇ ಸರ್ವೆ ಆಗಿಲ್ಲ ಹಾಗೂ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

4. ಸರ್ವೆ ನಂಬರ್-82/6(ಸಿ) ಜಮೀನಿನ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. ದೇವಸ್ಥಾನಕ್ಕೆ ಹೋಗಲು ಸದರಿ ಪೂರ್ವದಲ್ಲಿ ರಸ್ತೆ ಇದೆ ಎಂದು ಸೂಚಿಸಿದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಮ್ಮ ಜಮೀನಿಗೆ ಹೋಗಲು ನಾವು ರಸ್ತೆ ಮಾಡಿಕೊಂಡಿದ್ದೇವೆ ಎನ್ನುತ್ತಾರೆ, ಸದರಿ ರಸ್ತೆ ಮಣ್ಣಿನ ರಸ್ತೆಯಾಗಿದೆ. ಸದರಿ ರಸ್ತೆಯನ್ನು ದೇವಸ್ಥಾನಕ್ಕೆ ಹೋಗಲು ಮತ್ತು ಊರಿಗೆ ಹೋಗಲು ಬಳಸುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಸಾರ್ವಜನಿಕರು ಎಲ್ಲರೂ ಬಳಸುತ್ತಾರೆ ಎನ್ನುತ್ತಾರೆ. ರಸ್ತೆಯ ಪಶ್ಚಿಮಕ್ಕೆ ಪ್ರತಿವಾದಿ 1 ರವರ ಮನೆ ಇದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಮ್ಮ 7 ಗುಂಟೆ ಖರಾಬು ಜಮೀನಿದ್ದು, ಆದಾದ ನಂತರ ಪ್ರತಿವಾದಿ 1 ರವರ ಮನೆ ಇದೆ ಎನ್ನುತ್ತಾರೆ. ನಾನು ಹಾಜರು ಪಡಿಸಿರುವ ನಿಪಿ-2 ಪಹಣಿಯಲ್ಲಿ ಖರಾಬು ಇರುವ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಪಹಣಿಯಲ್ಲಿ ತಿದ್ದುಪಡಿ ಆಗಿಲ್ಲ ಎನ್ನುತ್ತಾರೆ. ದಾವ ಸರ್ವೆ ನಂಬರಿಗೆ ಸಂಬಂಧಿಸಿದಂತೆ ತಿದ್ದುಪಡಿ ದಾಖಲೆ ಹಾಜರು ಪಡಿಸಿದ್ದೇನೆ. ನಾನು ಆ ಸಂಬಂಧ ನಾನು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

5. ನಿಪಿ-3 ರಲ್ಲಿ ಕೇವಲ 17 ಗುಂಟೆ ನಮೂದು ಆಗಿದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ನಮ್ಮ ಚಿಕ್ಕಪ್ಪನಿಂದ ಖರೀದಿ ಮಾಡಿದ್ದನ್ನು ಮಾತ್ರ ನಮೂದಿಸಲಾಗಿದೆ ಎನ್ನುತ್ತಾರೆ. ನಿಪಿ-4 ರಲ್ಲಿ ಒಟ್ಟು 25 ಗುಂಟೆ ಮಾತ್ರ ಇದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕೈ ಬರವಣಿಗೆ ಆಗಿರುವುದರಿಂದ ತಪ್ಪಾಗಿರುತ್ತದೆ ಎನ್ನುತ್ತಾರೆ. ಸದರಿ ಕೈ ಬರವಣಿಗೆ ತಪ್ಪಾಗಿದೆ ಎಂದು ಇದುವರೆವಿಗೂ ತಿದ್ದುಪಡಿ ಮಾಡಿಸಲು ಯಾವುದೇ ಕಾನೂನು ಕ್ರಮ ಜರುಗಿಸಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಯು ಅನಕ್ಷರಸ್ಥರಾಗಿದ್ದು, ಅವರಿಗೆ ಗೊತ್ತಿರಲಿಲ್ಲ ಎನ್ನುತ್ತಾರೆ. ನಿಪಿ-5 ರಂತೆ ಕೂಡ 25 ಗುಂಟೆ ಮಾತ್ರ

ನಮೂದಿಸಲಾಗಿದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿಯನ್ನು ನಾನು ಇನ್ನು ಪರಿಶೀಲನೆ ಮಾಡಿರುವುದಿಲ್ಲ ಎನ್ನುತ್ತಾರೆ. ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವುವಾಗ ಪರಿಶೀಲನೆ ಮಾಡಿ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ನನ್ನ ತಂದೆ ಅನಕ್ಷರಸ್ಥರಾಗಿದ್ದು, ಅವರಿಗೆ ಓದಲು ಬರೆಯಲು ಬರುವುದಿಲ್ಲ ಎನ್ನುತ್ತಾರೆ.

6. ನಿಪಿ-6 ರಲ್ಲಿ ನಮೂದಿಸಿರುವ ಸಂಖ್ಯೆ 7 ಮತ್ತು 27 ನ್ನು ವೃತ್ತಾಕಾರದಲ್ಲಿ ಸುತ್ತಿದ್ದು, ಅದನ್ನು ಯಾರು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಅದರಂತೆ ಪೆನ್ಸಿಲ್ ನಲ್ಲಿ 34 ಗುಂಟೆ ಬರೆದಿದ್ದು, ಅದನ್ನು ಯಾರು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಬರವಣಿಗೆಗ ಸಂಬಂಧಿಸಿದಂತೆ ಯಾವುದೇ ಅಧಿಕಾರಿಯು ಸಹಿ ಮಾಡಿಲ್ಲ ಎಂದರೆ ಸರಿ. ಸರ್ವೆ ನಂಬರ-82/6(ಸಿ) ರಲ್ಲಿ ಕೇವಲ 27 ಗುಂಟೆ ಜಮೀನಿದ್ದು, ದಾವೆಗಾಗಿ ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಯಲ್ಲಿ ಪೆನ್ಸಿಲ್ ನಲ್ಲಿ ನಾವೆ ತಿದ್ದುಪಡಿ ಮಾಡಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಖರಾಬು ಇರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಸದರಿ ನಿಪಿ-6 ರಲ್ಲಿ ಕೇವಲ 34 ಗುಂಟೆ ಇರುವ ಬಗ್ಗೆ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂಬರ-82/6(ಸಿ) ರಲ್ಲಿ 1 ಎಕರೆ 1 ಗುಂಟೆ ಇದ್ದು, ಸದರಿಯು ಎ, ಬಿ ಮತ್ತು ಸಿ ಎಂದು ವಿಭಾಗವಾಗಿದ್ದು, ಸಿ ಜಮೀನು ನಮ್ಮದಾಗಿರುತ್ತದೆ. ಸರ್ವೆ ನಂಬರ್-82 ರಲ್ಲಿ ಎಷ್ಟು ಪೂಡಿ ಆಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್-82/6(ಎ) ರಲ್ಲಿ 36 ಗುಂಟೆ ಹೈನು ಜಮೀನು ಹಾಗೂ 12 ಗುಂಟೆ ಖರಾಬು ಇದೆ. ಸರ್ವೆ ನಂಬರ್-82/6(ಬಿ) ರಲ್ಲಿ 30 ಗುಂಟೆ ಹೈನು ಜಮೀನು ಹಾಗೂ 6 ಗುಂಟೆ ಖರಾಬು ಇದೆ. ಸರ್ವೆ ನಂಬರ್-82/6(ಸಿ) ರಲ್ಲಿ 34 ಗುಂಟೆ ಹೈನು ಜಮೀನು ಹಾಗೂ 7 ಗುಂಟೆ ಖರಾಬು ಜಮೀನು ಇದೆ.

7. ಪ್ರತಿವಾದಿ 1 ಮತ್ತು ಆತನ ಸಹೋದರರು ಸರ್ವೆ ನಂಬರ್-82 ರ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಮನೆ ಕಟ್ಟಿರುತ್ತಾರೆ ಎನ್ನುತ್ತಾರೆ.

**ಅ. ದಾ. ಸಂ. : 329 / 2016**
**ಪಿ.ಡಬ್ಲ್ಯೂ : 01**

ಸದರಿಯವರು ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಮನೆ ಕಟ್ಟಿರುತ್ತಾರೆಂದು ದಾಖಲೆ ಹಾಜರು ಪಡಿಸಿಲ್ಲ. ಸರ್ವೆ ನಂಬರ್-82/6(ಸಿ) ಜಮೀನಿನ ಉತ್ತರದಲ್ಲಿಯು ಕೂಡ ರಸ್ತೆ ಇದೆ ಎಂದರೆ ಸಾಕ್ಷಿ ನಾವು ಇತ್ತೀಚೆಗೆ ನಮ್ಮ ಜಮೀನಿಗೆ ಹೋಗಲು ರಸ್ತೆ ಮಾಡಿಕೊಂಡಿದ್ದೇವೆ ಎನ್ನುತ್ತಾರೆ. ಸದರಿ ರಸ್ತೆ 4 ವರ್ಷದ ಹಿಂದೆ ಮಾಡಿರುತ್ತೇವೆ ಎನ್ನುತ್ತಾರೆ. ಸದರಿಯು ಮೂಲತಃ ಮಣ್ಣಿನ ರಸ್ತೆಯಾಗಿದ್ದು, ಇತ್ತೀಚೆಗೆ ದೇವಸ್ಥಾನದ ಭಕ್ತಾಧಿಗಳು ಸಿಮೆಂಟ್ ರಸ್ತೆ ಮಾಡಿರುತ್ತಾರೆ. ಸದರಿಯು ಸುಮಾರು 10 ಅಡಿ ರಸ್ತೆಯಾಗಿದೆ. ಸದರಿ ರಸ್ತೆಯು ನಮ್ಮ ಜಮೀನಿಗೆ ಮತ್ತು ಊರು ಒಳಗೆ ಸಂಪರ್ಕ ಕಲ್ಪಿಸುತ್ತದೆ. ಸದರಿ ರಸ್ತೆಯಲ್ಲಿ ಸಾರ್ವಜನಿಕರು ಓಡಾಡುತ್ತಾರೆ ಎನ್ನುತ್ತಾರೆ. ಸದರಿ ರಸ್ತೆಯನ್ನು ಪಂಚಾಯ್ತಿಯಿಂದ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವೆಯನ್ನು ಪ್ರತಿವಾದಿ 1 ರಿಂದ 4 ರವರ ವಿರುದ್ದ ಹೂಡಲಾಗಿದೆ. ಪ್ರತಿವಾದಿ 4 ರವರು ಬದುಕಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿಯವರ ಬಗ್ಗೆ ಖುದ್ದಾಗಿ ಗೊತ್ತಿಲ್ಲ, ಸಾಕ್ಷಿ ಮುಂದುವರೆದು 1 ವರ್ಷದ ಹಿಂದೆ ನಾಪತ್ತೆಯಾಗಿರುತ್ತಾರೆ ಎನ್ನುತ್ತಾರೆ. ಸದರಿಯವರು ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**